ಒ.ಎಸ್.ನಂಃ 66/2018
ಪಿ.ಡಬ್ಲೂ.2

**ದಿಃ09.01.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲು:-** ಪ್ರತಿವಾದಿ ಪರ ವಕೀಲರಿಂದ ಃ-

ವಾದಿ ರತ್ನಮ್ಮ ನನ್ನ ತಾಯಿ ಇರುತ್ತಾರೆ. ಪ್ರತಿವಾದಿಯು ನನ್ನ ತಾಯಿಯ ಸೊಸೆ ಇರುತ್ತಾರೆ ಎಂದರೆ ಸರಿ. ನನ್ನ ತಂದೆ ಜೀವಂತ ಇರುವ ಕಾಲದಿಂದ ಇವತ್ತಿನ ವರೆಗೂ ನನ್ನ ತವರು ಮನೆಯ ಎಲ್ಲಾ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇರತ್ತದೆ. ಸಾಕ್ಷಿಯ ಮುಂದುವರೆದು ನನಗೆ ಕೆಲ ವಿಷಯ ಗೊತ್ತಿರುತ್ತದೆ, ಕೆಲ ವಿಷಯ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತವರು ಮನೆಗೆ ಸಂಬಂಧ ಪಟ್ಟ ಯಾವ ಆಸ್ತಿಗಳು ಇರುತ್ತವೆ ಎಂದು ನನಗೆ ಗೊತ್ತಿರುತ್ತದೆ. ನನಗೆ ಬಸವರಾಜ ಮತ್ತು ನಾಗರಾಜ ಎನ್ನುವ ಇಬ್ಬರು ಸಹೋದರರು ಇದ್ದರು ಎಂದರೆ ಸರಿ. ಅವರಿಬ್ಬರೂ ಈಗ ಮರಣ ಹೊಂದಿರುತ್ತಾರೆ ಎಂದರೆ ಸರಿ. ನನ್ನ ಅಣ್ಣ ಬಸವರಾಜ ದಿಃ 25-05-2009 ರಂದು ಮರಣ ಹೊಂದಿರುತ್ತಾರೆ. ಅವರು ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ನನ್ನ ಅಣ್ಣ ಮರಣ ಹೊಂದಿದ ನಂತರ ಆತನ ಹೆಂಡತಿಯಾದ ಪ್ರತಿವಾದಿಗೆ ಅನುಕಂಪದ ಆಧಾರದ ಮೇಲೆ ನೌಕರಿ ಬಂದಿರುತ್ತದೆ ಎಂದರೆ ಸರಿ. ಈಗ ಪ್ರತಿವಾದಿ ಚಿತ್ರದುರ್ಗ ಜಿಲ್ಲೆಯ ತರುವನೂರ ಗ್ರಾವಮದಲ್ಲಿ ಇರುವ ಸರ್ಕಾರಿ ಹೈಸ್ಕೂಲ್ ನಲ್ಲಿ ದ್ವಿತೀಯ ದರ್ಜೆ ಸಹಾಯಾಕರೆಂದು ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿಗೆ ಇಬ್ಬರು ಹೆಣ್ಣು ಮಕ್ಕಳ ಇರುತ್ತಾರೆ ಎಂದರೆ ಸರಿ. ನನ್ನ ಅಣ್ಣ ಬಸವರಾಜ ಮರಣ ಹೊಂದಿದ ನಂತರ ಪ್ರತಿವಾದಿಯ ನನ್ನ ತಾಯಿಯ ಪಾಲನೆ ಪೋಷಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಣ್ಣ ಮರಣ ಹೊಂದಿದ ನಂತರ ಪ್ರತಿವಾದಿಗೆ ಅನುಕಂಪದ ಆಧಾರದ ಮೇಲೆ ನೌಕರಿ ಸಿಕ್ಕ ನಂತರ ದಿದ್ದಿಗೆ ಗ್ರಾಮದಲ್ಲಿ ಹಿರಿಯರ ಸಮಕ್ಷಮ ನನ್ನ ತಾಯಿ ಮತ್ತು ಪ್ರತಿವಾದಿಯ ನಡುವೆ ಪಂಚಾಯ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಪಂಚಾಯ್ತಿಯಲ್ಲಿ ನನ್ನ ತಾಯಿ ಪ್ರತಿವಾದಿ ಮತ್ತು ಅವಳ ಮಗ ಮಲ್ಲಿಕ ಇವರ ಹೆಸರಿನಲ್ಲಿ ದಾನ ಪತ್ರವನ್ನು ಬರೆದುಕೊಡುತ್ತೇನೆ ಎಂದ ಒಪ್ಪಿ ಕೊಂಡಿರತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ಸದರಿ ದಾನಪತ್ರವನ್ನು ನೋಂದಣಿ ಮಾಡಲು ಬರದೇ ಇದ್ದ ಕಾರಣ ಸದರಿ ದಾನ ಪತ್ರ ನೋಂದಣಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಂತರ ದಿಃ 03-03-2016 ರಂದು ನನ್ನ ತಾಯಿ ಪ್ರತಿವಾದಿ

ಮತ್ತು ಅವಳ ಮಗನಾದ ಮಲ್ಲಿಕ ಈತನಿಗೆ ಜಗಳೂರು ಉಪನೋಂದಣಾಧಿಕಾರಿ ಕಛೇರಿಗೆ ಕರೆಸಿ ಅವರ ಸಮಕ್ಷಮ ದಾನ ಪತ್ರವನ್ನು ನೊಂದಣಿ ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಾಯಿ ಸನ್ 2015 ರ ಮೇ ತಿಂಗಳಲ್ಲಿ ಪಾರ್ಶ್ವವಾಯು ಆಗಿದ್ದರಿಂದ ಅವರು ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ಆನಂತರ ನಾವು ಅವರನ್ನು ದಿದ್ದಿಗೆ ಗ್ರಾಮಕ್ಕೆ ಕರೆದುಕೊಂಡು ಬಂದಿರುತ್ತೇವೆ, ಆ ಸಂದರ್ಭದಲ್ಲಿ ಪ್ರತಿವಾದಿಯ ನನ್ನ ತಾಯಿಗೆ ಕ್ರಯಪತ್ರ ಮಾಡುವುದಿದೆ ಎಂದು ಸುಳ್ಳು ಹೇಳಿ ಉಪನೋಂದಣಾಧಿಕಾರಿ ಕಛೇರಿ ಜಗಳೂರಿಗೆ ಕರೆದುಕೊಂಡು ಹೋಗಿ ನಿಪಿ-1 ದಾನಪತ್ರವನ್ನು ಬರೆಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಾಯಿಗೆ ನಾವು ಪಾರ್ಶ್ವವಾಯು ಚಿಕಿತ್ಸೆಯನ್ನು ಬೆಂಗಳೂರಿನ ಪೆನಾಲ್ಷಿಯಾ ಆಸ್ಪತ್ರೆಯಲ್ಲಿ ಮಾಡಿಸಿರುತ್ತೇವೆ. ನನ್ನ ತಾಯಿ ಸದರಿ ಆಸ್ಪತ್ರೆಯಲ್ಲಿ 15 ದಿನಗಳವರೆಗೂ ಒಳರೋಗಿಯಾಗಿ ಚಿಕಿತ್ಸೆ ಪಡೆದಿರತ್ತಾರೆ. ಅವರ ತಲೆಭಾಗಕ್ಕೆ ಪಾರ್ಶ್ವವಾಯು ಆಗಿತ್ತು. ನನ್ನ ತಾಯಿ ಸದರಿ ಆಸ್ಪತ್ರೆಯಲ್ಲಿ ಸಮಾರು 8 ದಿನಗಳವರೆಗೂ ಪ್ರಜ್ಞಾಹೀನ ಸ್ಥಿತಿಯಲ್ಲಿ ಇದ್ದರು. ಸದರಿ 8 ದಿನ ಅವಧಿಯಲ್ಲಿ ನನ್ನ ತಾಯಿ ಯಾವುದೇ ವಿಷಯದ ಬಗ್ಗೆ ಯಾರ ಜೊತೆಯಲ್ಲಿಯೂ ಮಾತನಾಡಿರುವುದಿಲ್ಲ. ನನ್ನ ತಾಯಿ ಮೇಲೆ ಹೇಳಿದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ದಿಃ 03-03-2016 ರಂದು ನನ್ನ ತಾಯಿ ಆರೋಗ್ಯವಂತರಾಗಿದ್ದರು ಎಂದರೆ ಸರಿಯಲ್ಲ. ದಿಃ 21-04-2014 ರಂದ ನನ್ನ ತಾಯಿ ತನ್ನ ಎರಡು ಜಮೀನುಗಳನ್ನು ನನ್ನ ಹೆಸರಿಗೆ ದಾನ ಮಾಡಿರುತ್ತಾರೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಸದರಿ ಆಸ್ತಿಗಳು ನನ್ನ ತಾಯಿಯ ತಂದೆಯ ಆಸ್ತಿಗಳಾಗಿರುತ್ತವೆ ಎಂದು ನುಡಿಯುತ್ತಾರೆ. ದಿಃ 21-04-2014 ರಂದು ನನ್ನ ತಾಯಿಯ ಆರೋಗ್ಯ ಯಾವ ಸ್ಥಿತಿಯಲ್ಲಿ ಇತ್ತು , ಅದೇ ಸ್ಥಿತಿಯಲ್ಲಿ ದಿಃ 03-03-2016 ರಂದು ಸಹ ಇತ್ತು ಎಂದರೆ ಸರಿಯಲ್ಲ. ನನಗೆ ದಿದ್ದಿಗೆ ಗ್ರಾಮದ ಹನುಮಂತಪ್ಪ ತಂದೆ ಮುರಿಗೆಪ್ಪ ಮತ್ತು ಜಿ.ಎನ್. ಕುಬೇರಪ್ಪ ತಂದೆ ನಿಂಗಪ್ಪ ಇವರ ಪರಿಚಯ ಇರುತ್ತದೆ. ನನ್ನ ತಾಯಿ ಬಿಳ್ಚೋಡು ಪೋಲೀಸ್ ಠಾಣೆಯಲ್ಲಿ ಪ್ರತಿವಾದಿ ಮೋಸದಿಂದ ಒಂದು ದಾನ ಪತ್ರವನ್ನು ಬರೆಸಿಕೊಂಡಿರುತ್ತಾರೆ ಎಂದು ಅವರ ವಿರುದ್ಧ ಒಂದ ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ದೂರು ಏನಾಯಿತು ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ದೂರಿನ

ಆಧಾದರ ಮೇರೆಗೆ ಬಿಳ್ಚೋಡು ಪೋಲೀಸ್ ಠಾಣೆಗೆ ಪ್ರಕರಣ ದಾಖಲಾಗಿ ಅದರ ಬಗ್ಗೆ ತನಿಖೆ ಆಗಿ ಸದರಿ ದೂರು ಸುಳ್ಳು ಇರುತ್ತದೆ ಎಂದು ತನಿಖಾಧಿಕಾರಿಗಳು ಬಿ ಅಂತಿಮ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ ತಾಯಿ ಆರೋಗ್ಯವಂತರಿದ್ದಾಗ ತಮ್ಮ ಸ್ವ ಇಚ್ಚೆಯಿಂದ ದಿಃ 03-03-2016 ರಂದು ಪ್ರತಿವಾದಿ ಮತ್ತು ಅವರ ಮಗ ಮಲ್ಲಿಕ್ ಈತನ ಹೆಸರಿನಲ್ಲಿ ದಾವಾ ಆಸ್ತಿ ಕುರಿತು ದಾನ ಪತ್ರವನ್ನು ಬರೆದುಕೊಟ್ಟಿದ್ದರೂ ಸಹ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 03-03-2016 ರಿಂದ ಪ್ರತಿವಾದಿ ಮತ್ತು ಅವಳ ಮಗ ಮಲ್ಲಿಕ ದಾವಾ ಆಸ್ತಿಯ ಸಂಪೂರ್ಣ ಮಾಲೀಕರು ಮತ್ತು ಕಬ್ಜೆದಾರರು ಇರುತ್ತಾರೆ ಎಂದರೆ ಸರಿಯಲ್ಲ. ಇವತ್ತಿಗೂ ಸಹ ದಾವಾ ಆಸ್ತಿಯ ಎಲ್ಲಾ ದಾಖಲೆಗಳು ಪ್ರತಿವಾದಿಯ ಹೆಸರಿನಲ್ಲಿ ದಾಖಲಿರುತ್ತವೆ ಎಂದರೆ ಸಾಕ್ಷಿಯು ಅವರು ಸುಳ್ಳು ದಾಖಲೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಸಿವಿಲ್ ನ್ಯಾಯಾಧೀಶರು, ಜಗಳೂರು**